ಅ) ಈ ಬಗ್ಗೆ ಸರ್ಕಾರದವರ ಸ್ಪಷ್ಟ ನಿಲುವುಗಳೇನು ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ಸರ್ಕಾರದ ಪರಿಶೀಲನೆಯಲ್ಲಿದೆ.

ಆ) (ಅ) ಗೆ ನೀಡಿರುವ ಉತ್ತರದಿಂದ ಇದಕ್ಕೆ ಉದ್ಭವಿಸುವುದಿಲ್ಲ.

ವರಾಹಿ ನೀರಾವರಿ ಯೋಜನೆ ಕಂರಿತು

೧೪೫೦ (೨೮೩೭) ಶ್ರೀ ಜಿ.ಎಸ್. ಆಚಾರ್ (ಬೈಂದೂರು).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಭಾಗದ ರೈತರಿಗೆ ಹಾಗೂ ಬ್ರಹ್ಮಾವರ ಸಹಕಾರಿ ಸಕ್ಕರೆ ಕಾರ್ಖಾನೆಗೆ ವರದಾನವಾಗಬಲ್ಲ ವರಾಹಿ ನೀರಾವರಿ ಯೋಜನೆ ಕಾಮಗಾರಿಯಲ್ಲಿ ಈ ತನಕ ಯಾವ ಯಾವ ಕೆಲಸಗಳಿಗೆ ಕಳೆದ ಮೂರು ವರ್ಷಗಳಿಂದ ಎಷ್ಟೆಷ್ಟು ಹಣ ವೆಚ್ಚ ಮಾಡಲಾಗಿದೆ ?

ಆ) ಈ ನೀರಾವರಿ ಯೋಜನೆಯನ್ನು ಸರ್ಕಾರದವರು ಖಂಡಿತವಾಗಿ ಪ್ರಾರಂಭಿಸಲಾಗುವುದೆಂದು ತಿಳಿಸಿರುವುದು ನಿಜವೇ ?

ಇ) ಹಾಗಿದ್ದಲ್ಲಿ ಈ ಯೋಜನಾ ಕಾಮಗಾರಿಯನ್ನು ಈ ಪ್ರಸಕ್ತ ಸಾಲಿನಲ್ಲಿ ಪ್ರಾರಂಭಿಸಲು ಕ್ರಮ ಕೈಗೊಳ್ಳುವರೆ ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಮಂತ್ರಿಗಳು).—

ಅ) ವರಾಹಿ ನೀರಾವರಿ ಯೋಜನೆಯಲ್ಲಿ ಕಳೆದ ೩ ವರ್ಷಗಳಲ್ಲಿ ಯೋಜನೆಯ ವಿವಿಧ ಅಂಗಗಳಿಗೆ ವೆಚ್ಚ ಮಾಡಲಾಗಿರುವ ವಿವರ ಕೆಳಕಂಡಂತಿದೆ.

(ಲಕ್ಷ ರೂಪಾಯಿಗಳಲ್ಲಿ)

	ವಿವರಗಳು	೧೯೮೫-೮೬	೧೯೮೬-೮೭	೧೯೮೭-೮೮
೧	ಯೋಜನಾ ಸಿಬ್ಬಂದಿ	೫.೫೫	೬.೪೫	೮.೫೬
೨	ಯಂತ್ರ ಸಾಮಾಗ್ರಿ ಮತ್ತು ಸಲಕರಣೆ	೧.೦೨	೦.೮೮	೦.೭೨
೩	ಜಲಾಶಯ	—	—	೦.೧೦
೪	ಅಣೆಕಟ್ಟು ಮತ್ತು ತತ್ಸಂಬದ	೮.೦೧	೧೯.೩೩	೦.೨೧
೫	ಕಾಲುವೆ ಮತ್ತು ಶಾಖೆಗಳು	೦.೦೨	೦.೭೯	೦.೧೪
೬	ರಸ್ತೆಗಳು	೦.೦೨	೦.೦೪	೦.೧೪
೭	ಕಟ್ಟಡಗಳು	೧.೦೦	೧.೮೭	೧.೫೦
೮	ಅಮಾನತ್ತು (ನಿವ್ವಳ)	೧೦.೧೭	(—) ೮.೮೮	(—) ೦.೨೪
೯	ಬಂಡವಾಳ ಮೊತ್ತದ ಮೇಲಿನ ವಸೂಲಿ	(—) ೦.೧೪	(—) ೦.೩೦	(—) ೦.೨೯
	ಒಟ್ಟು (ಲಕ್ಷ ರೂ.ಗಳಲ್ಲಿ)	೨೫.೬೫	೨೦.೧೮	೧೧.೮೪

ಆ) ನಿಜ.

ಇ) ಅವಶ್ಯವಿರುವ ಕಾದಿರಿಸಿದ ಅರಣ್ಯ ಪ್ರದೇಶವನ್ನು ಬಿಡುಗಡೆ ಪಡೆಯುವ ಕ್ರಮ ಹಾಗೂ ಅಣೆಕಟ್ಟಿನ ಟೆಂಡರ್ ಕರೆಯುವ ಕ್ರಮ.

ರಾಜ್ಯದಲ್ಲಿ ಕಿರಿಯ ಪ್ರಾಥಮಿಕ ಶಾಲೆಗಳ ಸಮಸ್ಯೆ

೧೪೫೧ (೨೮೪೫) ಶ್ರೀ ಎನ್.ಹೆಚ್. ಗೌಡ (ಕುಮಟಾ).—ಮಾನ್ಯ ಪ್ರಾಥಮಿಕ ಹಾಗೂ ಪೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕರ್ನಾಟಕದಲ್ಲಿರುವ ಒಟ್ಟು ಕಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು ?

ಆ) ಅವುಗಳಲ್ಲಿ ಏಕಶಿಕ್ಷಕ ಶಾಲೆಗಳ ಸಂಖ್ಯೆ ಎಷ್ಟು ?

ಇ) ಹಾಗಿದ್ದಲ್ಲಿ ಏಕ ಶಿಕ್ಷಕ ಶಾಲೆಗೆ ಇನ್ನೊಬ್ಬ ಶಿಕ್ಷಕನನ್ನು ನೇಮಿಸುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದರೆ ಶಿಕ್ಷಕರನ್ನು ಭರ್ತಿ ಮಾಡುವ ಕಾರ್ಯವನ್ನು ಯಾವಾಗ ಪೂರ್ತಿಗೊಳಿಸಲಾಗುವುದು.

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು).—

ಅ) ೨೨೬೦.

ಆ) ೧೪೧೮೦.

ಇ) ಬಂದಿದೆ.

ಈ) ಕಪ್ಪು ಹಲಗೆ ಯೋಜನೆಯಡಿಯಲ್ಲಿ ಮಂಜೂರಾಗಿರುವ ೧೬೧೧ ಶಿಕ್ಷಕರನ್ನು ಏಕಶಿಕ್ಷಕ ಶಾಲೆಗಳಲ್ಲಿ ನೇಮಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ,

ಅನಗವಾಡಿ ಸೇತುವೆ ಕುರಿತಂ

೧೪೫೩ (೩೦೨೮) ಶ್ರೀ ಬಾಬುರೆಡ್ಡಿ ತುಂಗಳ್ (ಬೀಳಗಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸೊಲ್ಲಾಪುರ ಹುಬ್ಬಳ್ಳಿ ಹೆದ್ದಾರಿಯಲ್ಲಿ ಅನಗವಾಡಿ ಹತ್ತಿರ ಘಟಪ್ರಭಾ ನದಿಗೆ ಅಡ್ಡಲಾಗಿ ಕಟ್ಟಲಿರುವ ಸೇತುವೆಯ ಶಂಕುಸ್ಥಾಪನೆಯಾಗಿದ್ದುದು ಯಾವಾಗ ?

ಆ) ಅದರ ಅಂದಾಜು ಖರ್ಚು ಎಷ್ಟು ?

ಇ) ಈವರೆಗೆ ಸೇತುವೆಯ ನಿರ್ಮಾಣ ಕಾರ್ಯ ಆರಂಭವಾಗದಿರಲು ಕಾರಣಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಶಂಕುಸ್ಥಾಪನೆಯನ್ನು ಅಕ್ಟೋಬರ್ ೮೬ರಲ್ಲಿ ನೆರವೇರಿಸಲಾಯಿತು.

ಆ) ೨೬೭ ಲಕ್ಷ ರೂ.ಗಳು.

ಇ) ಈ ಕೆಲಸವನ್ನು ವಿಶ್ವಬ್ಯಾಂಕ್ ನೆರವಿನಿಂದ ಕೈಗೊಳ್ಳಬೇಕಾದ ಕೃಷ್ಣಾ ಮೇಲ್ದಂಡೆ ಯೋಜನೆಯ ಅಂದಾಜಿನಲ್ಲಿ ಸೇರಿಸಲಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯ ವಿಶ್ವಬ್ಯಾಂಕ್‌ನ ನೆರವನ್ನು ಪಡೆದು ಕೊಳ್ಳುವಲ್ಲಿ ಇನ್ನೂ ಅಂತಿಮ ಒಪ್ಪಿಂದವಾಗಿಲ್ಲದ ಕಾರಣ ಈ ಕೆಲಸವನ್ನು ಕೈಗೆತ್ತಿಕೊಳ್ಳಲಾಗಿಲ್ಲ.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಟನೆಗಳ ವಿಚಾರ

೧೪೫೪ (೨೯೭೯) ಶ್ರೀ ಬಾಬುರೆಡ್ಡಿ ತುಂಗಳ್ (ಬೀಳಗಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಗಳು ಎಷ್ಟು?

ಆ) ಸರ್ಕಾರದಿಂದ ಮಾನ್ಯತೆ ಪಡೆದ ಸಂಘಗಳು ಯಾವುದಾದರೂ ಇವೆಯೇ, ಹಾಗಿದ್ದಲ್ಲಿ ಅವುಗಳು ಯಾವುವು ?

ಇ) ಹಾಗಿದ್ದಲ್ಲಿ ಮಾನ್ಯತೆ ಪಡೆಯದೇ ಇರುವ ಸಂಘಗಳ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?